ಇರಬಹುದು. ಅಸುರಕ್ಷತೆಯಿದ್ದಾಗ ಬದುಕಿಗೋಸ್ಕರ ಪರಸ್ಪರರು ಬಿಗಿಯಾಗಿ ಅಪ್ಪಿಕೊಳ್ಳುವುದು ಅನಿವಾರ್ಯ. 'ಹೇಗೂ ಮದುವೆಯಾಗಿದೆ. ಇನ್ನೇನು... ಬಿದ್ದಿರುತ್ತಾಳೆ...' ಎನ್ನುವ ಭಾವನೆಯೊಂದು ಈ ಸಂಬಂಧದಲ್ಲಿ ನುಸುಳುವುದಕ್ಕೆ ಸಾಧ್ಯವೇ ಇಲ್ಲ ಎನಿಸುತ್ತದೆ. ಎಲ್ಲ ಮದುವೆಗಳಲ್ಲಿಯೂ ಅಂತಹುದೇ ಭಾವನೆ ಇರುತ್ತದೆ ಎನ್ನುವಂತಿಲ್ಲ. ಆದರೆ ಮದುವೆಯ ಬಂಧದೊಳಗೆ ಒಂದು ರೀತಿಯ, 'ಟೇಕನ್ ಫಾರ್ ಗ್ರಾಂಟೆಡ್' ಭಾವನೆ ಇರುವುದನ್ನು ನಾನು ಗಮನಿಸಿದ್ದೇನೆ. ಈ ಸಂಬಂಧದಲ್ಲಿ ಅದಿಲ್ಲ'' ಎನ್ನುತ್ತಾರೆ ಸಂದೀಪ್.



ಒಂದಷ್ಟು ತಿಂಗಳೋ, ವರ್ಷವೋ ಜೊತೆಗಿದ್ದು ನಂತರ ಮದುವೆಯ ನಿರ್ಧಾರ ಮಾಡಿದವರೂ ಇದ್ದಾರೆ. ಅವನ ಆಸಕ್ತಿಯೇನು, ಅವಳ ಆಶಯವೇನು ಎಂಬುದನ್ನು ಅರ್ಥಮಾಡಿಕೊಳ್ಳುವುದಷ್ಟೇ ಅಲ್ಲ, ವ್ಯಕ್ತಿಯಲ್ಲಿ ಸಹಜವಾಗಿ ಇರುವ ದೌರ್ಬಲ್ಯಗಳೇನು ಮತ್ತು ಅವುಗಳನ್ನು ಸಹಿಸಿಕೊಂಡು ಬದುಕು ಕಟ್ಟಿಕೊಳ್ಳುವುದು ಸಾಧ್ಯವೇ ಎಂದು ಪರಿಶೀಲಿಸುವುದೇ ಇಲ್ಲಿ ಹೆಚ್ಚು ಸಮಂಜಸವಾಗಿರುತ್ತದೆ. ಔಪಚಾರಿಕ ಭೇಟಿಯಲ್ಲಿ ವ್ಯಕ್ತಿಯು ತನ್ನನ್ನು ತಾನು ಒಳ್ಳೆಯವನನ್ನಾಗಿಯೋ ಒಳ್ಳೆಯವಳನ್ನಾಗಿಯೋ ಬಿಂಬಿಸಿಕೊಳ್ಳುವುದು ಸಹಜವೇ ಆಗಿರುತ್ತದೆ. ಆದರೆ ಈ ಔಪಚಾರಿಕತೆಯ ಪರದೆಯನ್ನು ದಾಟಿದಾಗ ನೈಜ ವ್ಯಕ್ತಿತ್ವವು ಅನಾವರಣಗೊಳ್ಳುತ್ತದೆ. ಆಗ ಬದುಕು ಹೇಗಿರುತ್ತದೆ ಎಂದು ಗಮನಿಸಿದಾಗ ಅರಿವಿಗೆ ಬರುವ ವಿಚಾರಗಳೇ ಈ ಸಂಬಂಧವನ್ನು ಮದುವೆಯವರೆಗೆ ಮುಂದುವರೆಸಬೇಕೋ ಬೇಡವೋ ಎಂಬುದನ್ನು ನಿರ್ಧರಿಸುತ್ತವೆ.

## ಪ್ರಬುದ್ಧ ಮನಸ್ಸುಗಳಿಗೆ ಸವಾಲು

ವೈಯಕ್ತಿಕ ಸೌಕರ್ಯಗಳು ಹೆಚ್ಚಿದಂತೆ ಸಹಬಾಳ್ವೆ ನಡೆಸುವವರಲ್ಲಿ ಹೆಚ್ಚಿನ ಪ್ರೌಢತೆಯ ಅಗತ್ಯವಿರುತ್ತದೆ. ಅವಲಂಬನೆಯ ಅನಿವಾರ್ಯತೆ ಇಲ್ಲದೇ ಇದ್ದಾಗ ಪರಸ್ಪರ ಗೌರವ, ವೈಯಕ್ತಿಕ ಸ್ಪೇಸ್‌ಗೆ ಹೆಚ್ಚಿನ ಆದ್ಯತೆಯನ್ನು ಪ್ರಜ್ಞಾಪೂರ್ವಕವಾಗಿ ನೀಡಬೇಕಾಗುತ್ತದೆ. ಪ್ರಸ್ತುತ ಲಿವ್ ಇನ್ ರಿಲೇಷನ್‌ಶಿಪ್‌ನಲ್ಲಿ ಇವೆಲ್ಲವೂ ದೊರೆಯಬಹುದು ಎಂಬ ನಿರೀಕ್ಷೆ ಮೂಡತೊಡಗಿದೆ. ನಿರೀಕ್ಷೆ ನಿಜವಾಗುವುದೋ, ಹುಸಿಯಾಗುವುದೋ ಎಂದು ಕಾಲವಷ್ಟೇ ಹೇಳಬೇಕು.

ಲಿವ್ ಇನ್ ಸಂಬಂಧದ ಬಗ್ಗೆ ಸಮಾಜ ತನ್ನ ಪೂರ್ವಗ್ರಹಗಳಿಂದ ಹೊರಬರುತ್ತಿದ್ದು, ಮದುವೆಯ ಚೌಕಟ್ಟಿನಾಚೆಗಿನ ಸಂಬಂಧಗಳನ್ನು ಸಹಾನುಭೂತಿಯಿಂದ ನೋಡುವುದನ್ನು ಕಲಿತುಕೊಳ್ಳುತ್ತಿರುವುದು ಸ್ವಾಗತಾರ್ಹ. ಕಾನೂನು ಕೂಡ ಲಿವ್ ಇನ್ ಸಂಬಂಧಗಳನ್ನು ಸಹಾನುಭೂತಿಯಿಂದ ನೋಡುತ್ತಿದೆ. ಈ ಸಂದರ್ಭವನ್ನು ಯುವಜನತೆ ವಿವೇಚನೆಯಿಂದ ಬಳಸಿಕೊಳ್ಳಬೇಕು. ಗಂಡು ಹೆಣ್ಣಿನ ಸಂಬಂಧ ಆಕರ್ಷಣೆಗಷ್ಟೇ ಸೀಮಿತವಾಗದೆ, ಬದ್ಧತೆ–ವಿವೇಚನೆಯನ್ನೂ ಮೈಗೂಡಿಸಿಕೊಳ್ಳುವ ಅಗತ್ಯವನ್ನು ಯುವಜನ ಅರಿಯಬೇಕು. ಬದ್ಧತೆ ಎನ್ನುವುದು ಮದುವೆಗಷ್ಟೇ ಸೀಮಿತವಾದುದಲ್ಲ, ಅದು ಲಿವ್ ಇನ್ ಸೇರಿದಂತೆ ಎಲ್ಲ ಸಂಬಂಧಗಳಿಗೂ ಅನ್ವಯಿಸುವಂತಹದ್ದು.

ಪ್ರತಿಕ್ರಿಯಿಸಿ: feedback@sudha.co.in


1972 50 Years Golden Jubilee

# ರಾಜೇಂದ್ರ ಆಯುರ್ವೇದಿಕ್ ಕ್ಲಿನಿಕ್



**ಎಲ್ಲಾ ವಿಧದ ಕ್ಯಾನ್ಸರ್, ಪಾರ್ಶ್ವವಾಯು, ಸಂಧಿವಾತ, ಚರ್ಮ ರೋಗಗಳು, ಸೈನಸ್, ಅಸ್ತಮಾ, ಅಪಸ್ಮಾರ, ಖಿನ್ನತೆ, ಭಯ, ಆತಂಕ, ನಡುಕ ಇತ್ಯಾದಿ ಸೇರಿದಂತೆ ದೀರ್ಘಕಾಲದ ಕಾಯಿಲೆಗಳಿಗೆ ವಿಶೇಷ ವೈದ್ಯಕೀಯ ಚಿಕಿತ್ಸೆ.**

ಮಾನವರಲ್ಲಿ ರೋಗಗಳು ನಾಲ್ಕು ವಿಧದ ಕಾರಣಗಳಿಂದ ಉಂಟಾಗುತ್ತದೆ. ತಪ್ಪುಗಳು – ಅಪಘಾತಗಳು ವಂಶಪಾರಂಪರ್ಯ ಕಾರಣಗಳು ಹಿಂದಿನ ಜನ್ಮ ಕರ್ಮಗಳಿಂದ ಮನುಷ್ಯರು ಪ್ರಭಾವಿತರಾಗಿದ್ದಾರೆ.

**ವಿಜ್ಞಾನ ಆಕಾಶದೆತ್ತರಕ್ಕೆ ಬೆಳೆದು ಜಗತ್ತು ದಿನದಿಂದ ದಿನಕ್ಕೆ ಆಧುನಿಕವಾಗುತ್ತಿದ್ದರೂ ಮೇಲಿನ ಪ್ರಭಾವದ ಚಕ್ರದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಈ ಸಂದರ್ಭದಲ್ಲಿ, ಅಪಘಾತಗಳು ಮತ್ತು ಅನುವಂಶಿಕ ಕಾಯಿಲೆಗಳಿಗೆ ಸಂಬಂಧಿಸಿದಂತೆ ವಿಜ್ಞಾನವು ನಮಗೆ ಉಪಯುಕ್ತವಾಗಿದೆ. ಆದರೆ ಕರ್ಮ ರೋಗಗಳ ಸಂದರ್ಭದಲ್ಲಿ ತಪ್ಪುಗಳು – ಅಪಘಾತಗಳು, ವಿಜ್ಞಾನವು ಖಂಡಿತವಾಗಿಯೂ ಉಪಯುಕ್ತವಲ್ಲ. ಏಕೆಂದರೆ ಕರ್ಮ ರೋಗಗಳು ಬರೀ ಔಷಧದಿಂದ ಗುಣವಾಗುವಂಥದ್ದಲ್ಲ.**

ಭಾರತೀಯ ವೈದ್ಯಕೀಯ ಪದ್ಧತಿಯು ಕರ್ಮ ರೋಗಗಳ ಬಗ್ಗೆ ವಿವರವಾಗಿ ವಿವರಿಸಿದೆ. ಕೆಲವರಿಗೆ ವಿನಾಕಾರಣ ಕಾಯಿಲೆಗಳು ಬರುತ್ತವೆ. ಕೆಲವರಿಗೆ ಎಷ್ಟೇ ಚಿಕಿತ್ಸೆ ನೀಡಿದರೂ ಗುಣವಾಗುವುದಿಲ್ಲ. ಕೆಲವರಿಗೆ ಸೂಕ್ತವಲ್ಲದ ಕಾಯಿಲೆಗಳು ಬರುತ್ತವೆ. ಇದರ ಬಗ್ಗೆ ದೀರ್ಘ ವಿವರಣೆಗಳನ್ನು ನೀಡಬಹುದು. ಡಾ.ಕೆ.ವಿ.ರಾಜೇಂದ್ರನ್ RAMP, DNYS, M.A., ಕಳೆದ 50 ವರ್ಷಗಳಿಂದ ರಾಜ್ಯ ಮಟ್ಟದಲ್ಲಿ ದೇವರು ಮತ್ತು ಗುರುಗಳ ಕೃಪೆಯಿಂದ ಇಂತಹ ಕ್ಲಿಷ್ಟಕರ ಮತ್ತು ಸಂಕೀರ್ಣ ಕಾಯಿಲೆಗಳಿಗೆ ಯಶಸ್ವಿಯಾಗಿ ಚಿಕಿತ್ಸೆ ನೀಡುತ್ತಿದ್ದಾರೆ.

ಸರಿಯಾದ ಚಿಕಿತ್ಸೆ ದೊರೆಯದೆ ಜಿಗುಪ್ಸೆಗೊಂಡವರು ಕೂಡ ಒಂದು ಬಾರಿ ಭೇಟಿಯಾಗಿ, ಶಾಶ್ವತ ಪರಿಹಾರ ಪಡೆಯಿರಿ.

ನಡೆಯಲು ತೊಂದರೆಯಿರುವ ರೋಗಿಗಳಿಗೆ ಅವರವರ ಮನೆಗೆ ಬಂದು ಚಿಕಿತ್ಸೆ ಕೊಡುತ್ತೇವೆ.

**ಬೆಂಗಳೂರಿನಲ್ಲಿ ಪ್ರತಿ ತಿಂಗಳ 6 ರಿಂದ 25 ರವರೆಗೆ ನೀವು ವೈದ್ಯರನ್ನು ವೈಯಕ್ತಿಕವಾಗಿ ಭೇಟಿ ಮಾಡಬಹುದು.**

ನಂ.4, 6ನೇ ಕ್ರಾಸ್, ಎಂ.ಎಸ್.ರಾಮಯ್ಯ ರಸ್ತೆ (ಎಚ್‌ಎಂಟಿ ರಸ್ತೆ),
ಅಯ್ಯಪ್ಪ ದೇವಸ್ಥಾನದ ಬಸ್ ನಿಲ್ದಾಣ, ಎಸ್ಸಾರ್ ಪೆಟ್ರೋಲ್ ಬಂಕ್ ಎದುರು,
ಸುಬೇದಾರಪಾಳ್ಯ, ಯಶವಂತಪುರ, ಬೆಂಗಳೂರು–22,

**ಮೊ : 9344455511**